ವಿಷಯ :– ಪೋಲೀಸರಿಗೆ ಕೊಟ್ಟಿರುವ ಸಮವಸ್ತ್ರಗಳನ್ನು ವಾಪಸ್ಸು ಕೊಟ್ಟಿರುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 744 (1128)

ಶ್ರೀ ಎಂ. ನಾರಾಯಣಸ್ವಾಮಿ (ಬೇತ ಮಂಗಲ) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಪೋಲೀಸರಿಗೆ ಸಮವಸ್ತ್ರಗಳನ್ನು ವಿತರಣೆ ಮಾಡುತ್ತಿರುವುದು ನಿಜವಲ್ಲವೆ ?

ಆ) ಹಾಗಿದ್ದಲ್ಲಿ ಈ ವರ್ಷ ಇದಕ್ಕೆ ತಗಲಿದ ವೆಚ್ಚ ಎಷ್ಟು ?

ಇ) ಈ ಸಮವಸ್ತ್ರಗಳನ್ನು ಇಲಾಖೆಯಿಂದಲೇ ಹೊಲಿಸಿ ಕೊಡುತ್ತಿರುವುದು ನಿಜವೇ ?

ಈ) ಹಾಗಿದ್ದಲ್ಲಿ ಈ ವರ್ಷ ಹೊಲಿಸಿಕೊಟ್ಟ ಸಮವಸ್ತ್ರಗಳ ಅಳತೆ ಸರಿಯಿಲ್ಲವೆಂದು ಹಲವಾರು ಮಂದಿ ಪೋಲೀಸರು ಸಮವಸ್ತ್ರಗಳನ್ನು ತಿರಸ್ಕರಿಸಿರುವುದು ನಿಜವೇ ?

ಉ) ಹಾಗಿದ್ದಲ್ಲಿ ಇನ್ನು ಮುಂದೆ ಸಮವಸ್ತ್ರಗಳನ್ನು ಪೋಲೀಸರೆ ಹೊಲಿಸಿಕೊಳ್ಳಲು ಅನುಕೂಲ ವಾಗುವಂತೆ ಅವರಿಗೆ ಹೊಲಿಸಲು ತಗಲುವ ವೆಚ್ಚವನ್ನು ಕೊಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ?

ಊ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಸಚಿವರು) :–

ಅ) ಹೌದು.

ಆ) ಈ ಬಗ್ಗೆ ಸುಮಾರು 3 ಕೋಟಿ ರೂ. ಗಳ ಮಂಜೂರಾತಿ ವಿಷಯ ಸರ್ಕಾರದ ತೀವ್ರ ಪರಿಶೀಲನೆ ಯಲ್ಲಿದೆ.

ಇ) ಹೌದು.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ವಿಷಯ :– ನಗರದ ವಿವಿಧ ಪೋಲೀಸ್ ಠಾಣೆಯಲ್ಲಿ ವಶಪಡಿಸಿಕೊಂಡಿರುವ ಕಳ್ಳತನದ ಮಾಲುಗಳ ಹರಾಜು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 745 (1129)

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇತ್ತೀಚೆಗೆ ವಿಧಾನ ಸೌಧದಲ್ಲಿ "ಅಪರಾಧ ತಡೆಗಟ್ಟಿ ಸಪ್ತಾಹ"ದಲ್ಲಿ ಪ್ರದರ್ಶಿಸಲಾಗಿದ್ದ ಕಳ್ಳತನದಲ್ಲಿ ವಶಪಡಿಸಿಕೊಂಡಿರುವ ವಸ್ತುಗಳ ಒಟ್ಟು ಬೆಲೆಯೆಷ್ಟು ? (ಪ್ರತಿ ಠಾಣೆಯಲ್ಲಿ ವಶಪಡಿಸಿಕೊಳ್ಳಲಾದ ವಸ್ತು ಗಳ ಬಗ್ಗೆ ಪ್ರತ್ಯೇಕ ವಿವರ ನೀಡುವುದು)

ಆ) ಇವುಗಳನ್ನು ಹರಾಜು ಹಾಕಲಾಗುತ್ತಿದೆಯೇ ಹಾಗಿದ್ದಲ್ಲಿ ಯಾವಾಗ ?

ಇ) ಮೇಲ್ಕಂಡ ಸಪ್ತಾಹವನ್ನು ವಿಧಾನ ಸೌಧದಲ್ಲಿ ನಡೆಸಲು ತಗುಲಿದ ವೆಚ್ಚವೆಷ್ಟು ? ಯಾವ ಯಾವ ಬಾಬುಗಳಿಗೆ ಎಷ್ಟೆಷ್ಟು ವೆಚ್ಚವಾಗಿದೆ ಎನ್ನುವ ಬಗ್ಗೆ ವಿವರ ನೀಡುವುದು ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಮಂತ್ರಿಗಳು) :–

ಅ) ಅಪರಾಧ ತಡೆಗಟ್ಟುವ ಸಪ್ತಾಹದ ಅಂಗವಾಗಿ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪ್ರದರ್ಶಿಸಲ್ಪಟ್ಟ ವಸ್ತುಗಳ ಮೌಲ್ಯವು ರೂ. 1,43,81,512–00 (ಪೋಲೀಸ್ ಠಾಣೆವಾರು ಪ್ರದರ್ಶಿಸಿದ ಮಾಲುಗಳ ಪಟ್ಟಿಯನ್ನು ಅನುಬಂಧ–ಅ ನಲ್ಲಿ ಲಗತ್ತಿಸಿದೆ)

ಆ) ಈ ಮಾಲುಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಲು ಬರುವುದಿಲ್ಲ. ಕೋರ್ಟಿನ ಆದೇಶ ಪಡೆದ ನಂತರ ಮಾಲೀಕರಿಗೆ/ದೂರು ಅರ್ಜಿದಾರರಿಗೆ ಹಿಂತಿರುಗಿಸಲಾಗುವುದು .

ಇ) ರೂ. 36,885–00 ನ್ನು ಪ್ರದರ್ಶನಕ್ಕೆ ಖರ್ಚು ಮಾಡಲಾಗಿದೆ. ಈ ವಸ್ತುಗಳ ಪ್ರದರ್ಶನಕ್ಕಾಗಿ ಕೊಠಡಿಗಳ ನಿರ್ಮಾಣಕ್ಕೆ ಬೇಕಾದ ವಸ್ತುಗಳು, ಬಾಡಿಗೆ ಇನ್ನಿತರೆ ಈ ಖರ್ಚಿನಲ್ಲಿ ಸೇರಿದೆ.

ಅನುಬಂಧ–ಅ

ಪೋಲೀಸ್ ಠಾಣೆವಾರು ವಶಪಡಿಸಿಕೊಂಡ ವಸ್ತುಗಳು ಅವುಗಳ ಮೌಲ್ಯ

ಕ್ರ. ಸಂಖ್ಯೆ	ಪೋಲೀಸ್ ಠಾಣೆಗಳ ಹೆಸರು	ವಶಪಡಿಸಿಕೊಂಡ ಆಸ್ತಿಗಳ ಮೌಲ್ಯ
1)	ಯಶವಂತಪುರ	1,95,000–00
2)	ಜಾಲಹಳ್ಳಿ	68,000–00
3)	ಆರ್. ಎಂ. ಸಿ. ಯಾರ್ಡ್	47,520–00
4)	ಸೋಲದೇವನಹಳ್ಳಿ	21,320–00
5)	ಪೀಣ್ಯ	2,80 149–00
6)	ಗಂಗಮ್ಮನಗುಡಿ	8,79,903–00
7)	ಜೆ. ಸಿ. ನಗರ	78,520–00
8)	ಹೆಬ್ಬಾಳ	2,31,760–00
9)	ಯಲಹಂಕ	21,05,800–00
10)	ಆರ್. ಟಿ. ನಗರ	04,34,176–00
	ಒಟ್ಟು :	43,43,028–00
11)	ಮಲ್ಲೇಶ್ವರಂ	1,83,000–00
12)	ಸದಾಶಿವನಗರ	17,080–00
13)	ಶ್ರೀರಾಮಪುರ	28,830–00
14)	ರಾಜಾಜಿನಗರ	1,75,000–00
15)	ಸುಬ್ರಮಣ್ಯನಗರ	—
16)	ಮಹಾಲಕ್ಷ್ಮಿ	1,20,000–00
17)	ರಾಜಗೋಪಾಲನಗರ	1,50,000–00
	ಒಟ್ಟು :	6,73,910–00
18)	ಕೆಂಗೇರಿ ಗೇಟ್	1,40,000–00
19)	ಮಾಗಡಿ ರಸ್ತೆ	1,50,000–00
20)	ಜೆ. ಜೆ. ನಗರ	85,000–00
21	ಬ್ಯಾಟರಾಯನಪುರ	62,015–00
22)	ಜ್ಞಾನಭಾರತಿ	5,200–00
23)	ಕೆಂಗೇರಿ	—
24)	ವಿಜಯನಗರ	4,44,146–00
25)	ಬಸವೇಶ್ವರನಗರ	1,38,853–00
26)	ಕಾಮಾಕ್ಷಿ ಪಾಳ್ಯ	1,85,000–00
	ಒಟ್ಟು :	12,10,214–00
27)	ಸೆಂಟ್ರಲ್	1,89,300–00
28)	ಶಂಕರಪುರಂ	—

29)	ಎನ್.ಟಿ. ಪೇಟ್	20,000–00
30)	ವಿಕ್ಟೋರಿಯಾ ಆಸ್ಪತ್ರೆ	—
31)	ಚಾಮರಾಜಪೇಟ್	4,00,000–00
32)	ಕೆಂಪೇಗೌಡನಗರ	36,500–00
33)	ಹನುಮಂತನಗರ	60,000–00
34)	ಗಿರಿನಗರ	9,100–00
	ಒಟ್ಟು :	7,14,900–00
35)	ಬಸವನಗುಡಿ	14,000–00
36)	ಸಿದ್ಧಾಪುರ	32,000–00
37)	ತಿಲಕನಗರ	2,00,000–00
38)	ತ್ಯಾಗರಾಜನಗರ	1,00,000–00
39)	ಜಯನಗರ	2,75,000–00
40)	ಸುಬ್ರಮಣ್ಯಪುರ	1,23,650–00
41)	ಬನಶಂಕರಿ	3,30,000–00
42)	ಜೆ. ಪಿ. ನಗರ	7,00,000–00
	ಒಟ್ಟು :	17,74,650–00
43)	ಉಲಸೂರು ಗೇಟ್	—
44)	ಎಸ್. ಆರ್. ನಗರ	—
45)	ಎಸ್. ಜೆ. ಪಾರ್ಕ್	—
46)	ಅಶೋಕನಗರ	75,000–00
47)	ವಿಲ್ಸನ್ ಗಾರ್ಡನ್	16,300–00
48)	ಮಡಿವಾಳ	2,10,000–00
49)	ಕೋರಮಂಗಲ	10,43,085–00
50)	ಆಡುಗೋಡಿ	1,09,000–00
51)	ಮೈಕೋ ಲೇ ಔಟ್	70,000–00
	ಒಟ್ಟು :	15,23,385–00
52)	ಚಿಕ್ಕಪೇಟೆ	1,10,800–00
53)	ಉಪ್ಪಾರ ಪೇಟೆ	1,88,000–00
54)	ಮಾರ್ಕೆಟ್	2,04,000–00
55)	ಕಲಾಸಿಪಾಳ್ಯಂ	6,60,625–00
	ಒಟ್ಟು :	11,63,425–00
56)	ಶೇಷಾದ್ರಿಪುರಂ	25,000–00
57)	ಫೈಯಾಲಿಕಾಡಲ್	11,000–00
58)	ಕಬ್ಬನ್ ಪಾರ್ಕ್	2,60,000–00
59)	ವಿಧಾನ ಸೌಧ	—
60)	ಹೈಗ್ರೌಂಡ್ಸ್	44,000–00
	ಒಟ್ಟು :	3,40,000–00

61)	ಪ್ರೆಜರ್‌ಟೌನ್	2,62,300–00
62)	ಕೆ. ಜಿ. ಹಳ್ಳಿ	12,500–00
63)	ಬಾಣಸವಾಡಿ	2,65,400–00
64)	ಡಿ. ಜಿ. ಹಳ್ಳಿ	43,650–00
65)	ಕಮರ್ಷಿಯಲ್ ಸ್ಟ್ರೀಟ್	76,500–00
66)	ಶಿವಾಜಿನಗರ	1,62,000–00
67)	ಭಾರತಿನಗರ	1,60,425–00
68)	ಬೌರಿಂಗ್ ಆಸ್ಪತ್ರೆ	—
	ಒಟ್ಟು :	9,91,775–00
69)	ಆಲಸೂರು	316,000–00
70)	ವಿವೇಕನಗರ	23,925–00
71)	ಹೆಚ್.ಎ.ಎಲ್.	8,600–00
72)	ಏರ್‌ಪೋರ್ಟ್	8,700–00
73)	ಇಂದಿರಾನಗರ	55,000–00
74)	ಬೈಯಪ್ಪನಹಳ್ಳಿ	15,000–00
75)	ಕೆ. ಆರ್. ಪುರಂ	4,000–00
76)	ಜೆ. ಬಿ. ನಗರ	—
77)	ಮಹದೇವಪುರ	15,000–00
	ಒಟ್ಟು :	4,46,225–00
78)	ಸಿ. ಸಿ. ಬಿ.	12,00,000–00

ವಿಷಯ :– ಟಾಡಾ ಕಾಯಿದೆಯ ಬಳಕೆಯ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 746 (1132)

ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಟಾಡಾ ಕಾಯ್ದೆಯ ಮುಖ್ಯಾಂಶಗಳೇನು ?

ಆ) ಈ ಕಾಯ್ದೆಯನ್ನು ಸರ್ಕಾರ ಪೂರ್ಣವಾಗಿ ಅಭ್ಯಸಿಸಿದೆಯೇ ?

ಇ) ಇದನ್ನು ಎಂತಹ ಪರಿಸ್ಥಿತಿಯಲ್ಲಿ ಬಳಸಲಾಗುವುದು ಮತ್ತು ಯಾರ ಮೇಲೆ ಇದನ್ನು ಬಳಸಲಾಗುವುದು ?

ಈ) ರಾಜ್ಯದಲ್ಲಿ ಈಗ ಅಂತಹ ಗಂಭೀರ ಪರಿಸ್ಥಿತಿ ಉಂಟಾಗಿದೆಯೇ ?

ಉ) ಇಲ್ಲದಿದ್ದಲ್ಲಿ ಇಂತಹ ಉಗ್ರ ಕಾಯ್ದೆಯನ್ನು ಬಳಸುವ ಅಗತ್ಯವೇನು ?

ಊ) ಈ ಬಗ್ಗೆ ಸರ್ಕಾರದ ಮುಂದಿನ ಕ್ರಮಗಳೇನು ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಸಚಿವರು) :–

ಅ) ಆ ಕಾಯ್ದೆಯ ಮುಖ್ಯಾಂಶಗಳು ಈ ಕೆಳಗಿನಂತಿವೆ :

1) ಇದನ್ನು ಭಯೋತ್ಪಾದಕರ, ವಿಚಿದ್ರಕಾರಿಗಳ ಮೇಲೆ ಹಾಗೂ ಭಯೋತ್ಪಾದಕ ಅಥವಾ ವಿಚಿದ್ರಕಾರಿ ಕೃತ್ಯಗಳನ್ನು ಜರುಗಿಸಲು ಸಹಕರಿಸುವವರ ಮೇಲೆ ಉಪಯೋಗಿಸಬಹುದು.

2) ಈ ಕಾಯ್ದೆಯ ಕೆಳಗೆ ಬರುವ ಎಲ್ಲಾ ಅಪರಾಧಗಳು ಸೋಗ್ನೆಯ ಅಪರಾಧಗಳಾಗಿರುತ್ತವೆ.